ಆ) ಮೈಸೂರು ನಗರ ದಿನೇ ದಿನೇ ಬೆಳೆಯುತ್ತಿದ್ದು, ಕುಡಿಯುವ ನೀರಿನ ವಿಚಾರದಲ್ಲಿ ಯಾವ ಯಾವ ಯೋಜನೆಗಳನ್ನು ರೂಪಿಸಲಾಗಿದೆ;

ಇ) ಸದರಿ ಯೋಜನೆಗಳ ಯೋಜನಾ ವೆಚ್ಚ ಎಷ್ಟು; (ಯೋಜನಾ ಸ್ಥಳ ಇತ್ಯಾದಿ ವಿವರಗಳನ್ನು ನೀಡುವುದು);

ಈ) ಈ ಯೋಜನೆಗಳ ಜಾರಿ ಸಮಯ ನಿಗದಿಗೊಳಿಸಿ, ಶೀಘ್ರ ಜಾರಿಗೊಳಿಸುವ ಬಗ್ಗೆ ಸರ್ಕಾರ ಯಾವ ಯಾವ ಕ್ರಮ ಕೈಗೊಳ್ಳುತ್ತದೆ?

ಶ್ರೀ ಎನ್. ಧರ್ಮಸಿಂಗ್ ಮುಖ್ಯಮಂತ್ರಿಯವರು:

ಅ) ಮೈಸೂರು ನಗರಕ್ಕೆ ಪ್ರತಿದಿನ 4 ಯೋಜನೆಗಳಿಂದ ನೀರು ಸರಬರಾಜು ಮಾಡಲಾಗುತ್ತಿದೆ. ಪ್ರತಿ ಯೋಜನೆಯ ಸಾಮರ್ಥ್ಯ ಕೆಳಕಂಡಂತಿದೆ:

1. ಬೆಳಗೊಳ 1ನೇ ಹಂತ(35+800) –11.50 ಎಂ.ಜಿ.ಡಿ.
2. ಹೊಂಗಳ್ಳಿ 2ನೇ ಹಂತ – 8.50 ಎಂ.ಜಿ.ಡಿ.
3. ಹೊಂಗಳ್ಳಿ 3ನೇ ಹಂತ –12.50 ಎಂ.ಜಿ.ಡಿ.
4. ಮೇಳಾ ಪುರ 4ನೇ ಹಂತ –11.00 ಎಂ.ಜಿ.ಡಿ.

ಆ) ಪಸ್ತುತ ಸರಾಸರಿ ತಲಾವಾರು 125 ಲೀಟರ್ ಪ್ರತಿದಿನ ಸರಬರಾಜು ಮಾಡಲಾಗುತ್ತಿದೆ. ನಗರದ ಮುಂದಿನ ಬೆಳವಣಿಗೆಯನ್ನು ಪರಿಗಣಿಸಿ ಮೇಳಾಪುರ ಯೋಜನೆಯಿಂದ 2ನೇ ಫೇಸ್‌ನಲ್ಲಿ 11 ಎಂ.ಜಿ.ಡಿ. ನೀರು ಪಡೆಯಲು ಮೈಸೂರು ಮಹಾನಗರ ಪಾಲಿಕೆ ಕೌನ್ಸಿಲ್ ಸಭೆಯಲ್ಲಿ ತೀರ್ಮಾನಿಸಿ ಠರಾವು ಮಾಡಲಾಗಿದೆ. ಇದಲ್ಲದೆ ಮೈಸೂರು ನಗರದ ಹೊರ ವಲಯದಲ್ಲಿ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ನಿರ್ಮಾಣವಾಗಿರುವ ಬಡಾವಣೆಗಳಿಗೆ ಮತ್ತು ಸದರಿ ಪ್ರಾಧಿಕಾರದ ಅನುಮೋದನೆ ಪಡೆದು ರಚಿಸುತ್ತಿರುವ ಖಾಸಗಿ ಬಡಾವಣೆಗಳಿಗೆ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ಕಬಿನಿ ಯೋಜನೆಯಿಂದ ನೀರನ್ನು ತರಲು ಪರಿಶೀಲಿಸಲಾಗುತ್ತಿದೆ.

ಇ) ಮೇಳಾ ಪುರ 2ನೇ ಫೇಸ್ ಯೋಜನೆಗೆ ಸುಮಾರು ರೂ.600 ಲಕ್ಷ ಮತ್ತು ಕಬಿನಿ ನದಿಯಿಂದ ನೀರು ತರಲು ಸುಮಾರು ರೂ.4850 ಲಕ್ಷಗಳಾಬಹುದು.

ಈ) ಸದರಿ ಯೋಜನೆಗಳ ಅಂದಾಜು ತಯಾರಿಸಲು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ಬೆಂಗಳೂರು ಇವರಿಗೆ ಸೂಚಿಸಲಾಗಿದೆ. ನಿಗದಿತ ಅವಧಿಯಲ್ಲಿ ಯೋಜನೆಗಳನ್ನು ಪೂರ್ಣಗೊಳಿಸಲು ಕ್ರಮ ತೆಗೆದುಕೊಳ್ಳಲಾಗುವುದು.

344 (396) ಶ್ರೀ ಹೆಚ್.ಎಸ್. ಶಂಕರಲಿಂಗೇಗೌಡ (ಚಾಮರಾಜ):– ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಯಾವ ಯಾವ ಜಿಲ್ಲೆಯಲ್ಲಿ ಯಾವ ಯಾವ ಸ್ವಾತಂತ್ರ್ಯ ಹೋರಾಟಗಾರರು ನೆಲೆಸಿದ್ದಾರೆ. (ವಿಳಾಸ ಸಹಿತ ತಿಳಿಸುವುದು)

ಆ) ಸ್ವಾತಂತ್ರ್ಯ ಹೋರಾಟಗಾರರಿಗೆ ಹಾಲಿ ನೀಡುತ್ತಿರುವ ಪಿಂಚಣಿ ಮತ್ತಿತರೇ ಸೌಲಭ್ಯಗಳೇನು? (ವಿವರ ನೀಡುವುದು),

ಇ) ಸ್ವಾತಂತ್ರ ಹೋರಾಟಗಾರರು ರಾಜ್ಯ ಸರ್ಕಾರದ ಮುಂದೆ ಇಟ್ಟಿರುವ ಬೇಡಿಕೆಗಳಾವುವು?

ಈ) ಸ್ವಾತಂತ್ರ್ಯ ಹೋರಾಟಗಾರರ ಬೇಡಿಕೆಗಳ ಪೈಕಿ ಯಾವ ಯಾವ ಬೇಡಿಕೆಗಳನ್ನು ಯಾವ ಯಾವ ಸಮಯದಲ್ಲಿ ಈಡೇರಿಸಲಾಗುವುದು?

ಶ್ರೀ ಎನ್. ಧರ್ಮಸಿಂಗ್ (ಮುಖ್ಯಮಂತ್ರಿಗಳು):

ಅ) ಸ್ವಾತಂತ್ರ್ಯ ಹೋರಾಟಗಾರರ ರಾಜ್ಯ ಗೌರವಧನವನ್ನು ಜಿಲ್ಲಾ ಖಜಾನೆಗಳ ಮೂಲಕ ಅಥವಾ ಬ್ಯಾಂಕ್ ಖಾತೆಗೆ ಜಮಾ ಮಾಡಿ ವಿತರಿಸಲಾಗುತ್ತಿರುವುದರಿಂದ, ಸ್ವಾತಂತ್ರ್ಯ ಹೋರಾಟಗಾರರ ವಿಳಾಸದ ಮಾಹಿತಿಗಳನ್ನು ಕೇಂದ್ರ ಸ್ಥಾನದಲ್ಲಿ ಸಂಗ್ರಹಿಸಲಾಗಿಲ್ಲ.

ಆ) ರಾಜ್ಯದಲ್ಲಿ ಸ್ವಾತಂತ್ರ್ಯ ಹೋರಾಟಗಾರರಿಗೆ ಈ ಕೆಳಕಂಡ ಸೌಲಭ್ಯಗಳನ್ನು ನೀಡಲಾಗುತ್ತಿದೆ.

1. ಗೌರವಧನ ಮಾಸಿಕ 1,000/–ರೂ.ಗಳು.
2. ರಾಜ್ಯದಲ್ಲಿ ಪ್ರಯಾಣಿಸಲು ಉಚಿತ ಬಸ್‌ಪಾಸ್.
3. ವೈದ್ಯಕೀಯ ಸಹಾಯ.
4. ಮಕ್ಕಳ ವಿದ್ಯಾಭ್ಯಾಸಕ್ಕೆ ಮೀಸಲಾಗಿ.
5. ನಿವೇಶನ/ಗೃಹಗಳ ಹಂಚಿಕೆಯಲ್ಲಿ ಮೀಸಲಾತಿ.
6. ಶವಸಂಸ್ಕಾರಕ್ಕೆ 1,000/–ರೂ. ಧನಸಹಾಯ.

ಇ) 1. 1,000/–ರೂ.ಗಳಿಂದ ಗೌರವಧನವನ್ನು 3,000/–ರೂ.ಗಳಿಗೆ ಹೆಚ್ಚಿಸುವುದು.

2. ಅವರ ಜೊತೆಗೆ ಸಹಾಯಕರನ್ನು ಉಚಿತವಾಗಿ ಕರೆದುಕೊಂಡು ಹೋಗಲು ಅನುಮತಿ ನೀಡುವುದು.
3. ವೈದ್ಯಕೀಯ ವೆಚ್ಚವನ್ನು ಭರಿಸುವುದು.
4. ಒಂದು ಖಾಲಿ ನಿವೇಶನ ಅಥವಾ ಮನೆ ಕಟ್ಟಿ ಕೊಡುವುದು.
5. ಸ್ವಾತಂತ್ರ್ಯ ಯೋಧರ ಮಕ್ಕಳಿಗೆ ಅವರವರ ವಿದ್ಯಾರ್ಹತೆಗೆ ತಕ್ಕಂತೆ ಕೆಲಸ ನೀಡುವುದು.
6. ಅಂತ್ಯಸಂಸ್ಕಾರಕ್ಕೆ ಈಗ ನೀಡುತ್ತಿರುವ 1,000/–ರೂ.ಗಳನ್ನು 3,000/–ರೂ.ಗಳಿಗೆ ಹೆಚ್ಚಿಸುವುದು.

ಈ) ಬೇಡಿಕೆಗಳ ಈಡೇರಿಕೆಯನ್ನು ಆರ್ಥಿಕ ಲಭ್ಯತೆ ಹಾಗೂ ಸರ್ಕಾರದ ನೀತಿಯನ್ನು ಮೇರೆಗೆ ಸಕಾರಣಿಕವಾಗಿ ಪರಿಗಣಿಸಲಾಗುವುದು.

345 (459) ಡಾ:ಶರಣ ಪ್ರಕಾಶ್ ರುದ್ರಪ್ಪ ಪಾಟೀಲ್(ಸೇಡಂ):– ಜಲ ಸಂಪನ್ಮೂಲ ಮತ್ತು ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೇಡಂ ಮತಕ್ಷೇತ್ರದ ವ್ಯಾಪ್ತಿಯ ಚಿತ್ತಾಪುರ ತಾಲ್ಲೂಕಿನ ಆಲೂರು (ಬಿ) ಕೆರೆಯ ನಿರ್ಮಾಣ ಮಾಡಿ 6 ತಿಂಗಳ ಒಳಗಾಗಿ ಒಡೆದು ಹೋಗಿದ್ದಕ್ಕೆ ಹೊಣೆಗಾರರು ಯಾರು?

ಆ) ಆಲೂರು (ಬಿ) ಕೆರೆಯ ದುರಸ್ಥಿಯನ್ನು ಇಲಾಖೆಯಿಂದ ಮಾಡಲಾಗುವುದೇ? ಅಥವಾ ಆ ಸಂಬಂಧಪಟ್ಟ ಗುತ್ತಿಗೆದಾರರಿಂದ ಮಾಡಿಸಲಾಗುವುದೇ?